MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - MONDAY 12-9-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶೀಯನ್ ಪಾಮೆಣ್ಣೆ ಆಗಸ್ಟ್ ತಿಂಗಳ ದಾಸ್ತಾನು 33 ತಿಂಗಳ ಗರಿಷ್ಠ ಮಟ್ಟಕ್ಕೆ

ಮಲೇಶೀಯನ್ ಪಾಮೆಣ್ಣೆ ಆಗಸ್ಟ್ ತಿಂಗಳ ದಾಸ್ತಾನು ನವೆಂಬರ್ 2019 ರ ನಂತರದ 33 ತಿಂಗಳಲ್ಲೇ ಗರಿಷ್ಠ ಮಟ್ಟಕ್ಕೇರಿ 2.09 ಮಿಲಿಯನ್ ಟನ್‌ಗಳಾಗಿವೆಯೆಂದು ಮಲೇಶೀಯನ್ ಪಾಮೆಣ್ಣೆ ಬೋರ್ಡ(MPOB) ಪ್ರಕಟಿಸಿದೆ. ಸತತ 3 ತಿಂಗಳು ಕಚ್ಚಾ ಪಾಮೆಣ್ಣೆ ಉತ್ಪಾದನೆ ಹೆಚ್ಚಳವಾಗಿದೆ. ರಫ್ತು 1.94 ಶೇಕಡಾ ಇಳಿಕೆಯಾಗಿ 1.3 ಮಿಲಿಯನ್ ಟನ್‌ಗಳಾಗಿದೆ.

## ಜೋಳ ಬೇಡಿಕೆ ಇಳಿಕೆ ದರ ದುರ್ಬಲ

ಜೋಳ ದೇಶದ ಪ್ರಮುಖ ಮಾರುಕಟ್ಟೆಗಳಲ್ಲಿ ಮಿಲ್‌ಗಳಿಂದ ಹಾಗೂ ಪೌಲ್ಟ್ರಿ ವಲಯದಿಂದ ಬೇಡಿಕೆ ಇಳಿಕೆಯಾದುದರಿಂದ ದರ ಇಳಿಕೆಯಾಗಿದೆಯೆನ್ನಲಾಗಿದೆ.

## ಭಾರತದಿಂದ ಅಕ್ಕಿ ರಫ್ತು 4 ರಿಂದ 5 ಮಿಲಿಯನ್ ಟನ್ ಇಳಿಕೆ

ಅಕ್ಕಿ ಕಡಿ (BROKEN RICE) ಮೇಲಿನ ರಫ್ತು ನಿರ್ಬಂಧ ಹಾಗೂ ಬಾಸ್ಮತಿಯೇತರ ಅಕ್ಕಿ ಮೇಲೆ 20 ಶೇಕಡಾ ಆಮದುಕರ ವಿಧಿಸಿದ ನಂತರ ಈ ವರ್ಷದ ಅಕ್ಕಿ ರಫ್ತು 4 ರಿಂದ 5 ಮಿಲಿಯನ್ ಟನ್ ಇಳಿಕೆಯಾಗಿ 16–17 ಮಿಲಿಯನ್ ಟನ್‌ಗಳಾಗ ಬಹುದೆಂದು ಅಖಿಲ ಭಾರತ ಅಕ್ಕಿ ರಫ್ತು ಸಂಘಟಣೆ (AIREA)ಹೇಳಿದೆಯೆನ್ನಲಾಗಿದೆ. ಈ ವರ್ಷ 2021–22 ರಲ್ಲಿ ಭಾರತದಿಂದ 21.23 ಮಿಲಿಯನ್ ಟನ್ ಅಕ್ಕಿ ರಫ್ತು ಆಗಿದ್ದು, ಜಾಗತಿಕ ರಫ್ತಿನ 40 ಶೇಕಡಾ ಪಾಲುಪಡೆದಿದೆ.